# ಕಾಫಿ! ವಿಶ್ವರೂಪಿ..

ಪಾನೀಯವೊಂದರ ಜೊತೆಗೆ ಆಯಾ ನೆಲದ ಮಣ್ಣಿನ ವಾಸನೆ ಹಾಗೂ ಜನರ ಭಾವಕೋಶ ಬೆಸೆದುಕೊಂಡಿರುವುದು ವಿಶ್ವವ್ಯಾಪಿ 'ಕಾಫಿ ಸಂಸ್ಕೃತಿ'ಯ ಹಿರಿಮೆಯನ್ನು ಸೂಚಿಸುವಂತಿದೆ. ಈ ವಿಶ್ವರೂಪಿ ಕಾಫಿ ಕನ್ನಡರೂಪಿಯೂ ಹೌದು. ಧಾವಂತವೇ ಪ್ರಮುಖ ಲಕ್ಷಣವಾದ ಆಧುನಿಕ ಸಂದರ್ಭದಲ್ಲಿ, ಒತ್ತಡ ನಿವಾರಕ ಹಾಗೂ ಉಲ್ಲಾಸದಾಯಕ ಗುಣಗಳು ಕಾಫಿಯ ಬಹುಜನಪ್ರಿಯತೆಗೆ ಪ್ರಮುಖ ಕಾರಣಗಳಾಗಿವೆ.

★ ರಘುನಾಥ ಚ.ಹ.

'ಅನ್ನದ ಪ್ರತಿ ಅಗುಳಿನ ಮೇಲೆ ತಿನ್ನುವವರ ಹೆಸರು ಬರೆದಿರುತ್ತದೆ' ಎನ್ನುವುದು ಭಾರತೀಯ ಆಹಾರ ಸಂಸ್ಕೃತಿಯಲ್ಲಿನ ಜನಪ್ರಿಯ ನಂಬಿಕೆ. ಇದೇ ಮಾತನ್ನು, ಕಾಫಿಯ ಪ್ರತಿ ಗುಟುಕಿನಲ್ಲೂ ಕುಡಿಯುವವರ ಹೆಸರು ಬರೆದಿರುತ್ತದೆ ಎಂದು ಹೇಳಬಹುದೇ?

ಕಾಫಿ ದ್ರವ ಪದಾರ್ಥವಾದುದರಿಂದ ಅದರ ಮೇಲೆ ಹೆಸರು ಬರೆಯಲಾಗುವುದಿಲ್ಲ, ಬರೆದರೂ ಅದು ಉಳಿಯುವುದಿಲ್ಲ ಎಂದು ತರ್ಕ ಹೂಡಬಹುದು. ಈ ತರ್ಕವೇನೂ ಅನ್ನದ ಮುಂದೆ ಕಾಫಿಯ ಮಹಿಮೆಯನ್ನು ಅಗುಳಿನಷ್ಟೂ ಕಡಿಮೆಯಾಗಿಸುವುದಿಲ್ಲ. ಕಾಫಿಯ ಬಟ್ಟಲಿನಲ್ಲಿ ಏನಿಲ್ಲ? ಅಲ್ಲಿ ಮನುಷ್ಯರ ಭಾವಲೋಕದ ಸಿಹಿ– ಕಹಿಯಿದೆ. ಸಂತಸವಿದೆ. ಸಲ್ಲಾಪವೂ ಸ್ನೇಹವೂ ಇದೆ. ವಿರಾಗಕ್ಕೂ ವಿಚಾರಕ್ಕೂ ವಿಷಾದಕ್ಕೂ ಕಾಫಿ ಒದಗಿಬರುತ್ತದೆ. 'ಕಾಫಿಯೆಂಬುದೊಂದು ಬರಿಯ ಪೇಯ ಮಾತ್ರವೆ? / ಸಿಹಿ ಕಹಿಗಳ ಸಮರಸದ ಬಾಳಸೂತ್ರ ಅದರಲ್ಲಿಲ್ಲವೇ?' ಎನ್ನುವುದು ಕವಿಯೊಬ್ಬನ ಉದ್ಗಾರ.

ಕಾಫಿಗೂ ಕನ್ನಡನಾಡಿಗೂ ವಿಶಿಷ್ಟವಾದ ನಂಟು. ಕೊಂಚ ರಮ್ಯವಾಗಿ ಹೇಳುವುದಾದರೆ – ಎರಡರ ನಡುವಿನ 'ಕ'ಕಾರದ ಸಾಮ್ಯತೆ ಈ ಅನುಬಂಧಕ್ಕೆ ಒಂದು ಕಾರಣ. 'ಕಾಫಿ ಎನ್ನುವುದೊಂದು ಸ್ವಯಂಪೂರ್ಣ ಭಾಷೆ' ಎನ್ನುತ್ತಾನೆ ನಟ ಜಾಕಿ ಚಾನ್. ಆ ಭಾಷೆ ಕನ್ನಡವೇ ಇರಬಹುದು ಎಂದು ಕನ್ನಡಿಗರು ಭಾವಿಸಬಹುದು! ಹಾಂ, ಭಾರತದ ಒಟ್ಟು ಕಾಫಿ ಸಾಗುವಳಿಯಲ್ಲಿ ಕರ್ನಾಟಕದ ಪಾಲು ಶೇಕಡಾ ಅರವತ್ತು. ಅಂದರೆ 'ಕಾಫಿ ಪರೀಕ್ಷೆ'ಯಲ್ಲಿ ಕನ್ನಡಿಗರದು ಫಸ್ಟ್ ಕ್ಲಾಸು!

ಕನ್ನಡ ಸಾಂಸ್ಕೃತಿಕ ಲೋಕ ಕಾಫಿಗೆ ಸ್ಪಂದಿಸಿರುವ ಪರಿ ಅನನ್ಯವಾದುದು. ಕವಯಿತ್ರಿ ಪ್ರತಿಭಾ ನಂದಕುಮಾರ್, ಕಾಫಿಯನ್ನು ರೂಪಕವನ್ನಾಗಿಸಿಕೊಂಡು ಕವಿತೆಗಳನ್ನು ಬರೆದಿದ್ದಾರೆ, 'ಕಾಫಿ ಹೌಸ್' ಎನ್ನುವ ಸಂಕಲನ ಪ್ರಕಟಿಸಿದ್ದಾರೆ. ವಿವೇಕ ಶಾನಭಾಗರ ವಿಶ್ವಪ್ರಸಿದ್ಧ 'ಘಾಚರ್ ಘೋಚರ್' ನೀಳ್ಗತೆಯಲ್ಲಿ ಕಥನಕ್ಕೆ ಕ್ಯಾನ್ವಾಸ್ ರೂಪದಲ್ಲಿ ಕಾಫಿ ಹೌಸ್ ಬಳಕೆಯಾಗಿದೆ. ಅಲ್ಲಿನ ವೇಟರ್ ವಿನ್ಸಂಟ್ ಕಥಾನಾಯಕನ ಸಾಕ್ಷಿಪ್ರಜ್ಞೆಯಂತಿದ್ದಾನೆ.

ಕಾಫಿ ಹೌಸ್ ಎಂದಮೇಲೆ ಮೈಸೂರಿನ ಪ್ರಭಾ ಟಾಕೀಸ್ ಬಳಿಯಿದ್ದ 'ಕಾಫಿ ಹೌಸ್' ನೆನಪಿಸಿಕೊಳ್ಳದೆ ಹೋದರೆ ನಾಡಿನ ಕಾಫಿ ಸಂಸ್ಕೃತಿಯ ಸಾಕ್ಷಿಪ್ರಜ್ಞೆಗೆ ಅಪಮಾನ ಮಾಡಿದಂತಾದೀತು. ಕನ್ನಡ ಸಾಹಿತ್ಯದ ಅನೇಕ ಚರ್ಚೆಗಳಿಗೆ ವೇದಿಕೆಯಾಗಿದ್ದ ಖ್ಯಾತಿ ಅದರದು. ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ರಾಜೀವ ತಾರಾನಾಥ, ಗಿರಿ, ಸದಾಶಿವ, ಜಿ.ಎಚ್. ನಾಯಕ, ಡಿ.ವಿ. ಅರಸು, ವಿ.ಕೆ. ನಟರಾಜ, ನ. ರತ್ನ – ಹೀಗೆ ಅನೇಕರು ಕಾಫಿ ಹೌಸ್‌ನಲ್ಲಿ ಕಾಫಿ ಗುಟುಕರಿಸುತ್ತ ಸಾಹಿತ್ಯವನ್ನು ಗಂಟೆಗಟ್ಟಲೆ ಚರ್ಚಿಸುತ್ತಿದ್ದರಂತೆ.

ಯು.ಆರ್. ಅನಂತಮೂರ್ತಿ ಅವರ ಆತ್ಮಕಥನ 'ಸುರಗಿ'ಯಲ್ಲಿ ಮೈಸೂರಿನ ಕಾಫಿ ಹೌಸ್ ಪ್ರಸ್ತಾಪವಿದೆ. ಕೆಲವು ಸಾಲುಗಳನ್ನು ನೋಡಿ:

"ಕಾಫಿ ಹೌಸ್‌ನಲ್ಲಿ ಅಡಿಗರ ಕಾವ್ಯದ ಚರ್ಚೆ ನಡೆಯುತ್ತಿತ್ತು. ಅಡಿಗರು ಸಂಕೋಚದಿಂದಲೇ ತಮ್ಮ ಕೋಟಿನ ಜೇಬಿಗೆ ಕೈ ಹಾಕಿ ತಾವು ಬರೆದದ್ದನ್ನು ಓದಲು ಹಿಂಜರಿದು ಕೊಡುತ್ತಿದ್ದರು. ಅವರು ಎಂದೂ ತಮ್ಮ ಪದ್ಯಗಳನ್ನು ತಾವೇ ವಿವರಿಸುತ್ತಿರಲಿಲ್ಲ. ನನಗೆ ಅವರ ಕವನಗಳು ಇಷ್ಟವಾಗದಿದ್ದಾಗ ನೇರವಾಗಿ ಹೇಳಿಬಿಡುತ್ತಿದ್ದೆ. ಆಗ ಕೂಡ ಅವರು ವಾದಿಸುತ್ತಿರಲಿಲ್ಲ. ಅವರ 'ಭೂತ' ಕವನ ನನಗೆ 'ಮಚ್ ಅಡೋ ಎಬೌಟ್ ನಥಿಂಗ್' ಅನ್ನಿಸಿತ್ತು. ಅದನ್ನು ಅಡಿಗರಿಗೆ ಹೇಳಿದೆ ಕೂಡ. ಅವರು ನಕ್ಕು ಪದ್ಯವನ್ನು ಜೇಬಿಗಿಟ್ಟುಕೊಂಡರು."

"ಕಾಫಿ ಹೌಸ್‌ನಲ್ಲಿ ಅಡಿಗರ ಜೊತೆ ಭೇಟಿ, ನಿನ್ನೆ ಎತ್ತಿ ಮುಗಿಸಿದ್ದನ್ನು ಇವತ್ತು ಮತ್ತೆ ಎತ್ತಿ ಸತತವಾಗಿ ನಡೆಯುತ್ತಿದ್ದ ಚರ್ಚೆಗಳು ನನ್ನ ಹಲವಾರು ಬರವಣಿಗೆಗಳಿಗೆ ಪ್ರೇರಕವಾಗಿದ್ದವು. ಬೈಟು ಕಾಫಿ ನಡುವೆ, ಸಿಗರೇಟ್ ಹೊಗೆಯಲ್ಲಿ ಆವೃತ್ತರಾಗಿ ನಮ್ಮದೇ ಒಂದು ಲೋಕವನ್ನು ಈ ಸ್ನೇಹಶೀಲ ಕಾಫಿ ಹೌಸ್‌ನಲ್ಲಿ ನಿರ್ಮಿಸಿಕೊಂಡಿದ್ದೆವು. ಆದರೆ ಇದು ಯಾವಾಗ ಅಸಾಧ್ಯವಾಯಿತು ಹೇಳುತ್ತೇನೆ. ಸಾಹಿತ್ಯದಲ್ಲಿ ಆಧುನಿಕತೆಯನ್ನು ತರುತ್ತಿದ್ದ ಆ ಕಾಲದಲ್ಲಿ ಆಧುನಿಕವೆಂದು ನಾವು ತಿಳಿದಿದ್ದ ಜ್ಯೂಕ್ ಬಾಕ್ಸ್ 'ಕಾಫಿ ಹೌಸ್'ಗೆ ಕಾಲಿಟ್ಟಿತು. ಅದರ ಏರುದನಿಯ ಸದ್ದಿನ ಗೌಜಿಗೆ ಆಕರ್ಷಿತರಾಗಿ ಯುವಜನರು ಕಾಫಿ ಹೌಸನ್ನು ತುಂಬತೊಡಗಿದರು. ಆಧುನಿಕತೆಯೇ ಆಧುನಿಕ ಸಾಹಿತ್ಯದ ಚರ್ಚೆ ನಡೆಸುತ್ತಿದ್ದ ಸುಖಾಸನಗಳನ್ನು ನಮ್ಮಿಂದ